# ಜನ್ನನ ಯಶೋಧರೆ ಚರಿತೆಯಲ್ಲಿ ಅಮೃತಮತಿ ಮತ್ತು ಅಷ್ಟಾವಂಕನ ಪ್ರೇಮಾಂಕುರ: ಒಂದು ಅಧ್ಯಯನ

ಬೈರಯ್ಯ ಜಿ. ಕೆ.

ಕನ್ನಡ ಅಧ್ಯಾಪಕರು, ಪಿ.ವಿ.ಪಿ. ಪ್ರಥಮ ದರ್ಜೆ ಕಾಲೇಜು, ಜ್ಞಾನ ಗಂಗಾ ನಗರ, ಮಲ್ಲತಹಳ್ಳಿ, ಬೆಂಗಳೂರು.

**Received: 22/10/2024 ; Acepted: 10/11/2024 ; Published: 06/12/2024**

**DOI: https://doi.org/10.5281/zenodo.14289681**

## ABSTRACT:

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಜನ್ನ ಕವಿಯು ವಿಶಿಷ್ಟವಾಗಿ ಕಂಡುಬರುತ್ತಾನೆ. ಯಶೋಧರ ಚರಿತೆ ಕೃತಿಯಲ್ಲಿ ಕೃತಿಯಲ್ಲಿ ದೈಹಿಕ,ಮಾನಸಿಕ ಮತ್ತು ತಾರ್ಕಿಕ ಚಿಂತನೆಗಳು ಅಭಿವ್ಯಕ್ತಗೊಂಡಿವೆ. ಸೌಂದರ್ಯ ಮತ್ತು ಕುರೂಪತೆಯ ಅವಳಿ ವೈರುಧ್ಯಗಳು ವಿಭಿನ್ನತೆಯ ನೆಲೆಯಲ್ಲಿ ಚಿತ್ರಿತಗೊಂಡಿವೆ. ಪ್ರೀತಿಯಿಂದ ವಂಚಿತಳಾದ ರಾಣಿಯು ಸಾಮಾನ್ಯನ ಸಂಗೀತಕ್ಕೆ ಮನಸೋತು ಇಡೀ ಸರ್ವಸ್ವವನ್ನೇ ತ್ಯಾಗ ಮಾಡಿ ಅಷ್ಟವಂಕನಲ್ಲಿ ಬರುತ್ತಾಳೆ. ಆತನು ನೀಡುವ ಘೋರವಾದ ಶಿಕ್ಷೆ ಯಲ್ಲಿಯೂ ಆನಂದವನ್ನು ಪಡುತ್ತಾಳೆ.ಯಶೋಧರ ಮತ್ತು ಆತನ ಪೂರ್ವಜರು ಮಾಡಿದ ಪಾಪದ ಪ್ರತಿಫಲವಾಗಿ ಹಲವಾರು ಜನ್ಮಗಳನ್ನು ಎತ್ತಿ ಬಂದರು ಒಂದಲ್ಲ ಒಂದು ರೀತಿಯಲ್ಲಿ ಕಷ್ಟಗಳನ್ನು ಎದುರಿಸಬೇಕಾಯಿತು. ಅಹಿಂಸ ಪಾಲಕರಾಗಿದ್ದರು ಯಾವುದೋ ರೂಪದಲ್ಲಿ ಅವರಿಗೆ ಅರಿವು ಇಲ್ಲದೆಯೇ ಹಿಂಸೆಯನ್ನು ಮಾಡುವ ಮೂಲಕ ದೈಹಿಕ ಮತ್ತು ಮಾನಸಿಕವಾಗಿ ಕುಗ್ಗಿ ಹೋಗುವಂತೆ ವಿಧಿಯಾಟವು ಅವರ ಜೀವನದಲ್ಲಿ ನಡೆಯುತ್ತದೆ, ಎಂಬುದನ್ನು ಕವಿಯು ಚಿಂತನೆ ಮಾಡಿದ್ದಾರೆ.

## KEYWORDS:

ಮಧುರ ಧ್ವನಿ, ರೂಪಾಧಮನ, ಮುದಿಕರಡಿಯ ಚರ್ಮ, ಮಾನಸಿಕ ಖಿನ್ನತೆ, ಪುರುಷತ್ವ, ಗೂನುಬೆನ್ನು.

ಪ್ರಕೃತಿಯಲ್ಲಿ ಪ್ರೀತಿ ಮೂಡದ ಹೃದಯವಿಲ್ಲ, ಪ್ರೀತಿಯಲ್ಲಿ ಸಿಲುಕಿ ನಲುಗದ ಜೀವನವಿಲ್ಲ. ಇದು ನಿರಂತರವಾಗಿ ನಡೆದುಕೊಂಡು ಬಂದಿದೆ. ಜೀವಸೃಷ್ಟಿ ಕ್ರಿಯೆಯಿಂದಲೂ ಮೂಡಿಬಂದಿದೆ. ಪ್ರೀತಿಯು ರಾಜರು, ರಾಣಿಯರು, ಪಂಡಿತರು, ಮಂತ್ರಿಗಳು, ಜನಸಾಮಾನ್ಯರು ಹೀಗೆ ಎಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಪ್ರೀತಿಯ ಬಲೆಗೆ ಸಿಲುಕಿ ನರಕಯಾತನೆಯನ್ನು ಅನುಭವಿಸಿಕೊಂಡು ಬಂದವರೆ ಆಗಿದ್ದಾರೆ. ಪ್ರೇಮಾಂಕುರದ ವಿಚಾರಗಳು ಹಲವಾರು ಮಹಾಕಾವ್ಯಗಳಲ್ಲಿ

ಅಭಿವ್ಯಕ್ತಗೊಂಡಿರುತ್ತದೆ. ಕವಿಗಳ ಕಾಲ್ಪನಿಕತೆ ಮತ್ತು ವಾಸ್ತವಿಕತೆಯ ಅನುಭವದ ಮೇಲೆ ಹಲವಾರು ಕಾವ್ಯಗಳು ಮೂಡಿಬಂದಿವೆ. ಇವುಗಳಲ್ಲಿ ಜನ್ನ ಕವಿಯ ಯಶೋಧರ ಚರಿತೆಯಲ್ಲಿ ಪ್ರೀತಿ, ಪ್ರೇಮ, ಪ್ರಣಯದ ವಿಚಾರಗಳು ಅಭಿವ್ಯಕ್ತಗೊಂಡಿರುವುದನ್ನು ಗುರ್ತಿಸಬಹುದಾಗಿದೆ.

ಹಳಗನ್ನಡ ಸಾಹಿತ್ಯದ ಕೆಲವು ಕವಿಗಳು ರಸಿಕತೆಯನ್ನು ಮುಚ್ಚುಮರೆಯಿಲ್ಲದೆ ವರ್ಣಿಸಿದ್ದಾರೆ. ಆದಿಕವಿ ಪಂಪನಿಂದ ಇಡಿದು ಇತ್ತೀಚಿನ ಕವಿಗಳವರೆಗೆ ನಿರಂತರವಾಗಿ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದಾಗಿದೆ. ಆದರೆ ಜನ್ನಕವಿಯು ಎಲ್ಲ ಕವಿಗಳಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಪ್ರೇಮದ ರಸಿಕತೆಯನ್ನು ಅಭಿವ್ಯಕ್ತಿಸಿದ್ದಾನೆ. ಯಶೋಧರ ಚರಿತೆಯಲ್ಲಿ ಕಥಾನಾಯಕನ ಅವನ ಪೂರ್ವಜರು ಮಾಡಿದ ಪಾಪದ ಸಲುವಾಗಿ ಹಲವು ಜನ್ಮಗಳನ್ನೆತ್ತಿ ಸಾಂಸಾರಿಕ ಜೀವನ ನಡೆಸಿ, ಕಡೆಗೆ ಸದ್ಗುರುಗಳ ಬಳಿ ದೀಕ್ಷೆಗೊಳ್ಳುವರು. ಇದಕ್ಕೆಲ್ಲವೂ ಅಮೃತಮತಿಯ ವೃತ್ತಾಂತವೇ ಮೂಲ ಬುನಾದಿಯಾಗಿದೆ. ಯಶೋಧರನು ಉಜ್ಜೈನಿಯ ರಾಜಕುಮಾರ, ಅಮೃತಮತಿ ಅವನ ರಾಣಿಯಗಿದ್ದಾಳೆ. ಒಂದು ದಿನ ರಾತ್ರಿ ಯಶೋಧರ ಮತ್ತು ಅಮೃತಮತಿ ಸರಸ ವಿರಸದಿಂದ ರತಿ ಕ್ರೀಡೆಯಲ್ಲಿ ತೊಡಗಿ ಆನಂದದಿಂದ ನಿದ್ದೆ ಮಾಡುತ್ತಿರುತ್ತಾರೆ. ಹತ್ತಿರದ ಗಜಶಾಲೆಯಿಂದ ಮಾವುತನೊಬ್ಬನ ಹಾಡು ಪ್ರಶಾಂತವಾದ ವಾತಾವರಣದಲ್ಲಿ ಇಂಪಾದ ಧ್ವನಿಯಲ್ಲಿ ತೇಲಿಬರುತ್ತದೆ. ಈ ಮಧುರಗಾನಕ್ಕೆ ಅಮೃತಮತಿಯು ನಿದ್ದೆಯಿಂದ ಎಚ್ಚರ ಗೊಳ್ಳುತ್ತಾಳೆ. ಎಚ್ಚರಗೊಂಡ ಅಮೃತಮತಿಯು ಆ ಮಧುರಗಾನಕ್ಕೆ ಮನಸೋತು “ಮುಟ್ಟಿದ ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್” ಮಾವುತನು ಮಧುರಧ್ವನಿಯಲ್ಲಿ ಒಂದಾದ ಮೇಲೊಂದು ಹಾಡನ್ನು ಹಾಡುತ್ತಿರಲು ಕೇಳುತ್ತಾ ಕೇಳುತ್ತಾ ಬೆಳಗಾಗುವುದರೊಳಗೆ ರಾಣಿಗೆ ಹಾಡುಗಾರನನ್ನು ನೋಡುವ, ಕೂಡುವ ಚಿಂತೆಗೆ ಒಳಗಾಗುತ್ತಾಳೆ. ಕಾತುರದಿಂದ, ತವಕದಿಂದ ಆಕೆಯ ಮನಸ್ಸು ತಲ್ಲಣಗೊಂಡಿತು. ಬೆಳಗಾದ ಕೂಡಲೇ ತನ್ನ ಅಂತರಂಗದ ಬಯಕೆಯನ್ನು ಸೇವಕಿಯ ಮುಂದೆ ವ್ಯಕ್ತಪಡಿಸುತ್ತಾಳೆ. ಸೇವಕಿಯು ರಾಣಿಯ ಆದೇಶವನ್ನು ಪಾಲಿಸುತ್ತಾ ಗಜಶಾಲೆಯ ಹತ್ತಿರ ಬಂದು ಮಾವುತನ ಬಳಿಗೆ ಬಂದಳು. ದೂರದಿಂದ ಕುರೂಪಿಯಾದ ಮಾವುತನನ್ನು ಕಂಡು ಕಣ್ಣಿಗೂ ಮತ್ತು ಮನಸ್ಸಿಗೂ ವಾಕರಿಕೆ ಉಂಟಾಯಿತು. “ಅಯ್ಯೋ ದೇವರೇ! ಅಮೃತಮತಿಯಲ್ಲಿ ರೂಪಾಧಮನಾದ ಅಷ್ಟಾವಂಕನೆಲ್ಲಿ? ಚಿತ್ರಂ! ಅಪಾತ್ರೇ ರಮತೇ ನಾರಿ” ಎಂದು ಆಶ್ಚರ್ಯಗೊಂಡು ಸಖಿಯ ಹೆಂಗಸು ಅಯೋಗ್ಯನೊಡನೆ ರಮಿಸುತ್ತಾಳೆ ಎಂದೇಳುವ ಮೂಲಕ ಆ ಕೆಟ್ಟ ವಿಧಿಗೆ ಕಣ್ಣೇ ಇಲ್ಲವೋ! ಎಂದು ಸೇವಕಿಯು ಅಷ್ಟಾವಂಕನ ಕುರೂಪಿ ದೇಹವನ್ನು ನೋಡಿ ಮರುಕದಿಂದ ಚಿಂತೆಗೆ ಒಳಗಾಗುತ್ತಾಳೆ ಮತ್ತು ಅಸಹ್ಯಪಡುತ್ತಾಳೆ. ಜೊತೆಗೆ ರಾಣಿಯಾದವಳ ದುಸ್ಥಿತಿಯ ಮನಸ್ಸನ್ನು ಕಂಡು

ವಿಧಿಯನ್ನು ಕುರಿತು ರೋಧನೆಯನ್ನು ಮಾಡುತ್ತಾಳೆ.

ರಾಣಿಯಾದ ಅಮೃತಮತಿಯು ತನ್ನ ಸಖಿಯ ಬರುವಿಕೆಗಾಗಿ ಕಾತರದಿಂದ ಕಾಯುತ್ತಾ ಸೊರಗಿಹೋಗಿದ್ದಾಳೆ. ಆಕೆಯು ಬಂದೊಡನೆ ಸೌಂದರ್ಯಮತಿಯಾಗಿರುವ ನೀವು ಕುರೂಪಿ ಆದಂತಹ ಅಷ್ಟಾವಂಕನಿಗೆ ಹೇಗೆ ಮನಸೋತಿರಿ ಎಂದು ಕೇಳಿದ್ದಾಗ 'ಈ ಯಾವುದು ನನಗೆ ತಿಳಿದಿಲ್ಲ' ಎಂದು ಉತ್ತರಿಸುತ್ತಾ ನನ್ನ ನಲ್ಲನು ಯಾವ ರೀತಿಯಲ್ಲಿ ಇದ್ದಾನೆ ತಿಳಿಸು ಎಂದು ಕೇಳಿಕೊಳ್ಳುತ್ತಾಳೆ. ಅಮೃತಮತಿಯು ತನ್ನ ಪ್ರಿಯತಮನ ಕಾಣುವಿಕೆಯಲ್ಲಿ ತನ್ನ ಮನಸೋತಿದ್ದಾಳೆ. ಆಕೆಯ ಮನಸ್ಸು ತಲ್ಲಣಗೊಂಡಿದೆ. ಯಶೋಧರನಲ್ಲಿರದ ಪ್ರೀತಿ, ಪ್ರೇಮ, ಮಮತೆ, ವಾತ್ಸಲ್ಯವನ್ನು ಅಷ್ಟಾವಂಕನಲ್ಲಿ ನಿರೀಕ್ಷೆಮಾಡುತ್ತಿದ್ದಾಳೆ. ಹೆಣ್ಣಿಗೆ ಮುಖ್ಯವಾಗಿ ಬೇಕಾಗಿರುವ ಪ್ರೀತಿ, ಪ್ರೇಮ, ಕಾಳಜಿ, ಕಾಮದ ಬಯಕೆಯನ್ನ ಈಡೇರಿಸುವಲ್ಲಿ ಯಶೋಧರನು ವಿಫಲನಾಗಿರುತ್ತಾನೆ. ಸಹಜವಾಗಿ ಯಶೋಧರನು ಹಲವು ರಾಣಿಯರ ಸಹವಾಸದಿಂದ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ವಿಫಲನಾಗಿದ್ದಾನೆ. ಈ ವಿಚಾರದಲ್ಲಿ ಅಮೃತಮತಿಯ ಮನಸ್ಸು ತಲ್ಲಣಗೊಂಡಿದೆ. ಕೇವಲ ಮಾವುತನು ತನ್ನ ದೇಹದಲ್ಲಿ ಉಂಟಾಗಿರುವ ಗಾಯದ ನೋವನ್ನು ಮರೆಯಲು ಹಾಡನ್ನು ಹೇಳುತ್ತಾನೆ ಹೊರತು ಯಾವುದೇ ರೀತಿಯ ನಿರೀಕ್ಷೆಯಿಂದಲ್ಲ. ಅಮೃತಮತಿಯು ಈತನ ಗಾನವೇ ಇಷ್ಟೊಂದು ಇಂಪಾಗಿದೆ, ಅವನ ದೇಹವು ಯಾವ ರೀತಿಯಲ್ಲಿ ಸಧೃಢವಾಗಿರಬಹುದು ಎಂಬ ಬಯಕೆಯಿಂದ ಆತನನ್ನು ಕೂಡಲು ಇಡೀ ಸರ್ವಸ್ವವನ್ನು ತೊರೆದುಬರಲು ಸಿದ್ಧಳಾಗಿದ್ದಾಳೆ. ಪ್ರೀತಿಯ ಹುಡುಕಾಟದಲ್ಲಿ ತಲ್ಲೀನಳಾಗಿದ್ದಾಳೆ. ಹಾಗಾದರೆ ಯಶೋಧರ ರಾಜನು ತನ್ನ ರಾಣಿಯ ಬಯಕೆಗಳನ್ನು ಈಡೇರಿಸುವಲ್ಲಿ ಹೇಗೆ ವಿಫಲನಾಗಿದ್ದಾನೆ? ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಇದರಿಂದ ಹೆಣ್ಣಿಗೆ ಬೇಕಾಗಿರುವುದು ಹಣ, ಐಶ್ವರ್ಯ, ಸಂಪತ್ತು, ಅಧಿಕಾರ ಸುಖದ ಸಂಪತ್ತಲ್ಲ ಆಕೆಗೆ ಬೇಕಾಗಿರುವುದು ಪ್ರೀತಿ, ಮಮತೆ, ವಾತ್ಸಲ್ಯ ಮಾತ್ರ ಎಂದು ತಿಳಿಯುತ್ತದೆ.

ಸಖಿಯು ಅಷ್ಟಾವಂಕನ ವಿರೂಪವನ್ನು ವರ್ಣಿಸುತ್ತಾ ಅವನ ತಲೆಗೂದಲು ಅಲ್ಲಲ್ಲಿ ಕಿತ್ತುಹೋಗಿದೆ, ಬಾಯಲ್ಲಿ ಜೊಲ್ಲು ಸುರಿಯುತ್ತಿದೆ, ಚಪ್ಪಟೆಯಾದ ಮೂಗು, ಮುರುಟಿದ ಕಿವಿ, ಬಿದ್ದ ಹಲ್ಲು, ಕೊರಳು ಕುಗ್ಗಿದೆ, ಎದೆ ಒಳನುಗ್ಗಿದೆ, ಬೆನ್ನು ಹೊರಚಾಚಿದೆ, ಹೊಟ್ಟೆ ಉಬ್ಬಿಕೊಂಡಿದೆ, ಜನಘವು ಅಡಗಿಯೇ ಹೋಗಿದೆ, ಕರಿ ಮೆತ್ತಿದ ಚರ್ಮ, ದುರ್ಗಂಧ ತುಂಬಿದ ದೇಹ, ಗೂನು ಬೆನ್ನು, ಮುದಿಕರಡಿಯ ಕಪ್ಪನೆಯ ಚರ್ಮ ಹೀಗೆ ವಿರೂಪದಿಂದ ಕೂಡಿದ ಅಷ್ಟಾವಂಕನ ರೂಪದ ವರ್ಣನೆ ಮಾಡುತ್ತಾಳೆ. ಗೆಳತಿಯು ಹೇಸಿಕೊಂಡು, ವಾಕರಿಸಿಕೊಂಡು, ಮುಜುಗರದಿಂದ ಹೇಳಿದ ಮಾತುಗಳಲ್ಲಿ ಅಮೃತಮತಿಯ ಸವಿಯಾದ ಮಾತುಗಳಾಗಿ ಮಾರ್ಪಡಿಸಿಕೊಂಡು ಸಖಿ ಹೇಳಿದ ಮಾತುಗಳಿಗೆ ತದ್ವಿರುದ್ಧವಾಗಿ ತನ್ನ ಮನಸ್ಸಿನ

ಅಭಿಲಾಶೆಗಳನ್ನು ವ್ಯಕ್ತಪಡಿಸುತ್ತಾಳೆ.

ಅಮೃತಮತಿಯು ಕಸ್ತೂರಿಯನ್ನು ಬಣ್ಣದ ಆಧಾರದ ಮೇಲೆ ತಿರಸ್ಕರಿಸುತ್ತಾರೆಯೇ? ಶ್ರೀಗಂಧದ ಮರ ಡೊಂಕಾದರೆ ಅದರ ಸುಗಂಧವನ್ನು ತಿರಸ್ಕರಿಸುತ್ತಾರೆಯೇ? ಕಾಮನಬಿಲ್ಲು ವಕ್ರವಾಗಿ ಕಂಡರೆ ಅದರ ಸೌಂದರ್ಯಕ್ಕೆ ಕೊರತೆಯೇ ಎಂದೇಳುವ ಮೂಲಕ ಮನಸ್ಸಿಗೆ ಇಷ್ಟವಾದರೆ ಅವರ ರೂಪ, ಯೌವ್ವನದ ಬಗ್ಗೆ ಪ್ರಶ್ನೆಯೇ ಬರುವುದಿಲ್ಲ ಎಂದು ತನ್ನ ಅಂತರಾಳದ ಸ್ಥಿತಿಗತಿಗಳನ್ನು ಆಕೆ ವ್ಯಕ್ತಪಡಿಸುತ್ತಾಳೆ. ಜೊತೆಗೆ ಆತನೇ ತನ್ನ ಕುಲದೇವ, ಕಾಮದೇವ, ಇಂದ್ರ, ಚಂದ್ರ ಎಂದು ಅಪಾರವಾದ ಪ್ರೀತಿ ವಿಶ್ವಾಸದಿಂದ ಆತನನ್ನು ಕೂಡಲು ಬಯಸುತ್ತಾಳೆ. ಅಮೃತಮತಿಯ ಗೆಳತಿಯು ಬೇವನ್ನು ಮೆಚ್ಚಿದ ಕಾಗೆಗೆ ಮಾವು ಮೆಚ್ಚಿಗೆಯಾದೀತೆ? ಎಂದೇಳುವ ಮೂಲಕ ಯಶೋಧರ ಮತ್ತು ಅಮೃತಮತಿಯ ಪ್ರೇಮಾಂಕುರವನ್ನು ಕಂಡು, ಅವರ ಬದುಕಿನ ವಿಕೃತಿಯ ಬಗ್ಗೆ ಮರುಗುತ್ತಾಳೆ. ವಿಧಿಯಾಟದ ಬಗ್ಗೆ ತನ್ನಲ್ಲಿಯೇ ತಾನು ಮರುಕವನ್ನು ಪಡುತ್ತಾಳೆ.

ಅಮೃತಮತಿಯು ತನ್ನ ನೆಚ್ಚಿನ ಪ್ರಿಯತಮನನ್ನು ಕೂಡಲು ಬರುತ್ತಾಳೆ. ಕೆಲವೊಮ್ಮೆ ತಡವಾದರೆ ಅಷ್ಟಾವಂಕನು ನೀಡುವ ಘೋರವಾದ ಶಿಕ್ಷೆಯನ್ನು ಸಂತೋಷದಿಂದ ಅನುಭವಿಸುತ್ತಾಳೆ. ಅಮೃತಮತಿಯು ತನ್ನ ಪ್ರಿಯಕರನಿಗೆ ತಂದ ಹೂವು, ಗಂಧ, ತಾಂಬೂಲವನ್ನು ಚೆಲ್ಲಿ ಆಕೆಯ ತಲೆಗೂದಲನ್ನು ಹಿಡಿದೆಳೆದು, ತನ್ನಲ್ಲಿರುವ ಬಾರುಗೋಲಿನಿಂದ ಹೊಡೆಯುವ ಮೂಲಕ ಘೋರವಾದ ಶಿಕ್ಷೆಯನ್ನು ನೀಡುತ್ತಾನೆ. ಆದರೆ ಅಮೃತಮತಿಯು ನನ್ನ ಪ್ರೀತಿಯ ನಲ್ಲನೇ ನಾನು ಬಂದಿದ್ದು ತಡವಾಗಿದೆ, ನನ್ನ ಗಂಡನೆಂಬ ಪಾಪಿ ತನ್ನ ತೊಡೆಗೆ ತೊಡೆ ಸಿಲುಕಿಸಿಕೊಂಡು ಮಲಗಿದ್ದರಿಂದ ಬಿಡಿಸಿಕೊಂಡು ಬರಲು ತಡವಾಯಿತು. ನೀನು ಯಾವ ರೀತಿಯ ಶಿಕ್ಷೆಯನ್ನು ನೀಡಿದರು ನಾನು ಪ್ರೀತಿಯಿಂದ ಸ್ವೀಕರಿಸುತ್ತೇನೆ ಎಂದು ಬೇಡಿಕೊಳ್ಳುತ್ತಾಳೆ. ಆದರೆ ಅಷ್ಟಾವಂಕನಲ್ಲಿ ಯಾವುದೇ ರೀತಿಯ ಕ್ಷಮಿಸುವ ಗುಣವಾಗಲಿ, ತಾಳ್ಮೆ, ಸಹನೆಯಾಗಲೀ ಇರುವುದಿಲ್ಲ. ರಾಣಿಯೆಂಬುದನ್ನು ಮರೆತು, ಪ್ರೀತಿಯ ಮೋಹವನ್ನು ಮರೆತು ಘೋರವಾದ ಶಿಕ್ಷೆಯನ್ನು ನೀಡುತ್ತಾನೆ. ಹೀಗೆ ಅಮೃತಮತಿಯು ಅಷ್ಟಾವಂಕನನ್ನು ಕೂಡುವ ಸಂದರ್ಭದಲ್ಲಿ ಹಲವಾರು ಬಾರಿ ಶಿಕ್ಷೆಗೆ ಒಳಗಾಗಿ ನೋವನ್ನು ಅನುಭವಿಸುತ್ತಾಳೆ.

ಯಶೋಧರನು ಒಂದು ದಿನ ರಾತ್ರಿ ಮಲಗಿರುವ ಸಂದರ್ಭದಲ್ಲಿ ಕೆಟ್ಟದಾದ ಕನಸೊಂದನ್ನು ಕಾಣುತ್ತಾನೆ. ಇದರ ಪ್ರತಿಫಲವಾಗಿ ಆತನು ಎಚ್ಚರಗೊಂಡು ಅಮೃತಮತಿಯು ತನ್ನ ಪಕ್ಕದಲ್ಲಿ ಇಲ್ಲದಿರುವುದನ್ನು ಕಂಡು ಆಕೆಯನ್ನು ಹುಡುಕಿಕೊಂಡು ಬರುತ್ತಾನೆ. ಗಜಶಾಲೆಯಲ್ಲಿ ಅಮೃತಮತಿ ಮತ್ತು ಅಷ್ಟಾವಂಕನ ಪ್ರೀತಿ, ಪ್ರೇಮ, ಪ್ರಣಯವನ್ನು ಕಣ್ಣಾರೆ ಕಂಡು ಯಶೋಧರನು ಮಾನಸಿಕ ಖಿನ್ನತೆಗೆ

ಒಳಗಾಗಿ ತನ್ನ ತಾಯಿಯ ಬಳಿಗೆ ಬಂದು ತಾನು ಕಂಡ ದೃಶ್ಯವನ್ನು ವಿವರಿಸುತ್ತಾನೆ.

ಯಶೋಧರನ ಮನಸ್ಸು ಕಸಿವಿಸಿಗೊಂಡದ್ದನ್ನು ಕಂಡ ಯಶೋಧರನ ತಾಯಿಯು ಪರಿಪರಿಯಾಗಿ ಬೇಡಿಕೊಂಡಾಗ ತನ್ನ ಖಿನ್ನತೆಗೆ ಕಾರಣವನ್ನು ಹೇಳಲಾರದೆ, ಕಳೆದ ರಾತ್ರಿ ದುಸ್ವಪ್ನವನ್ನು ಕಂಡಿದ್ದಾಗಿ ಹೇಳುವನು. ಇದರ ನಿವಾರಣೆಗಾಗಿ ಪ್ರಾಣಿ ಬಲಿ ಕೊಡಬೇಕೆಂದು ತನ್ನ ತಾಯಿ ಸಲಹೆ ಮಾಡುತ್ತಾಳೆ. ಯಶೋಧರನ ಪೂರ್ವಜರು ಜೈನ ಧರ್ಮದ ಪರಿಪಾಲಕರಾಗಿರುತ್ತಾರೆ. ಪ್ರಾಣಿ ಬಲಿಯನ್ನು ಕೊಡಲು ಒಪ್ಪದೆ ತಾಯಿಯ ಸಮಾಧಾನಕ್ಕೆ ಹಿಟ್ಟಿನಿಂದ ಮಾಡಿದ ಕೋಳಿಯನ್ನು ಬಲಿಕೊಡಲು ಒಪ್ಪುವನು. ಹಿಟ್ಟಿನ ಕೋಳಿ ಬಲಿಕೊಟ್ಟಾಗ ಅದರೊಳಗೆ ಅಡಗಿದ್ದ ಬೇತಾಳವೊಂದು ಕೂಗಿ ಹಸುನೀಗಿತು. ಇದರಿಂದ ಮತ್ತೂ ಖಿನ್ನನಾದ ಯಶೋಧರನು ತನ್ನ ಮಗನಾದ ಯಶೋಮತಿಗೆ ಪಟ್ಟಕಟ್ಟಿ ಕಾಡಿನಲ್ಲಿ ತಪಸ್ಸನ್ನು ಆಚರಿಸಲು ಸಿದ್ಧತೆ ಮಾಡಿಕೊಂಡನು ಈ ವಿಚಾರ ತಿಳಿದ ಅಮೃತಮತಿಯು ತನ್ನ ಗಂಡ ಮತ್ತು ಅತ್ತೆಗೆ ವಿಷವಿಕ್ಕಿ ಕೊಲ್ಲುವಳು.

ಯಶೋಧರ ಮತ್ತು ಆತನ ತಾಯಿಯು ಅಹಿಂಸೆ ಪಾಲನೆ ಮಾಡಿದರೆ ಅದಕ್ಕೆ ವಿರುದ್ಧವಾಗಿ ಅಮೃತಮತಿಯು ಹಿಂಸಾಪಾಲಕಳಾಗಿ ಕಂಡುಬರುತ್ತಾಳೆ. ಅವರು ಪೂರ್ವ ಜನ್ಮದಲ್ಲಿ ಮಾಡಿದ ಪಾಪದ ಫಲವಾಗಿ ಅವರಿಂದ ವಿಧಿಯು ಮಾಡಬಾರದ ಕಾರ್ಯಗಳನ್ನು ಮಾಡಿಸಿ ಅವರ ವಿನಾಶಕ್ಕೆ ಬುನಾದಿಯಾಗುತ್ತದೆ. ಹಾಗೆಯೇ ಸತ್ತಂತಹ ಯಶೋಧರ ಮತ್ತು ಅಮೃತಮತಿಯು ಮುಂದಿನ ಜನ್ಮಗಳಲ್ಲಿ ನವಿಲು-ನಾಯಿ, ಹಾವು-ಮುಳ್ಳುಹಂದಿ, ಮೀನು-ಮೊಸಳೆ, ಆಡು-ಹೋತ, ಕೋಣ-ಹೋತಗಳಾಗಿ ಕಡೆಗೆ ಕೋಳಿ ಪಿಳ್ಳೆಗಳಾಗಿ ಜನಿಸುವರು. ಹೀಗೆ ವಿವಿಧ ಜನ್ಮ ತಾಳಿ ತಮ್ಮ ವಿನಾಶಕ್ಕೆ ಕಾರಣರಾದರು.

ಒಟ್ಟಾರೆಯಾಗಿ ಯಶೋಧರನು ಪೂರ್ವ ಜನ್ಮದಲ್ಲಿ ಮಾಡಿದ ಪಾಪದ ಫಲವಾಗಿ ಹಲವಾರು ಕಷ್ಟಕಾರ್ಪಣ್ಯಗಳನ್ನು ಎದುರಿಸಬೇಕಾಯಿತು. ತನ್ನ ಪುರುಷತ್ವವನ್ನು ಕಳೆದುಕೊಳ್ಳುತ್ತಾ ಬಂದ ಯಶೋಧರನಲ್ಲಿ ಪ್ರೀತಿ, ಪ್ರೇಮ, ಕಾಮದ ಬಯಕೆಗಳಿಂದ ಅಮೃತಮತಿಯು ವಂಚಿತಗೊಳ್ಳುವಳು. ಅಮೃತಮತಿಯು ಅನ್ಯ ಪುರುಷನಾದ ಅಷ್ಟಾವಂಕನ ಇಂಪಾದ ಧ್ವನಿಗೆ ಮನಸೋಲುತ್ತಾಳೆ ಹಾಗು ಇಡೀ ಸರ್ವಸ್ವವನ್ನು ಆತನಿಗೆ ತ್ಯಾಗ ಮಾಡುತ್ತಾಳೆ. ಅಷ್ಟಾವಂಕನಿಂದ ಪ್ರೀತಿ, ಪ್ರೇಮ, ಕಾಮದ ಬಯಕೆಗಳಿಗೆ ಅಮೃತಮತಿಯು ಆಸೆಪಟ್ಟು ಅವನು ಹೇಳುವ ಸಂಗೀತಕ್ಕೆ ಮನಸೋತು ಎಲ್ಲಾ ರೀತಿಯ ತ್ಯಾಗಗಳಿಗೆ ಮುಂದಾಗುತ್ತಾಳೆ. ರಾಣಿಯಾದಂತಹ ಅಮೃತಮತಿಯ ಜೀವನದಲ್ಲಿ ವಿಧಿಯಾಟವಾಡಿದ್ದು ಸಂಶಯಾತ್ಮಕವಾಗಿದೆ. ಅಷ್ಟಾವಂಕನಿಂದಲೂ ಅಮೃತಮತಿಯು ಪ್ರೀತಿಯ ಶೋಷಣೆಗೆ ಒಳಗಾಗುತ್ತಾಳೆ. ಜೊತೆಗೆ ಆತನು ನೀಡುವ ಎಲ್ಲಾ ರೀತಿಯ ಕಠಿಣ ಶಿಕ್ಷೆಯಲ್ಲಿಯೂ ತನ್ನ

ಬಯಕೆಗಳನ್ನು ತೀರಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಒಂದು ಹೆಣ್ಣಿನ ಮಾನಸಿಕ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳದ ಗಂಡು ಕೂಡ ಖಿನ್ನತೆಗೆ ಒಳಗಾಗುತ್ತಾನೆ. ರಾಣಿಯಾದವಳ ದುಸ್ಥಿತಿಯು ಸಂಶಯಾತ್ಮಕವಾಗಿದೆ. ಏಕೆಂದರೆ ಇದು ಸಾಧ್ಯವೇ? ಎಂಬ ಅನುಮಾನ ಉಂಟಾಗುತ್ತದೆ. ಅಮೃತಮತಿಯು ರಾಣಿಯಾದವಳು ಅಷ್ಟಾವಂಕನಿಂದ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವೇ? ಅಷ್ಟಾವಂಕನು ತನ್ನ ದೇಹದ ನೋವನ್ನು ಮರೆಯಲು ಹಾಡನ್ನು ಹಾಡಿದನೇ ಹೊರತೂ ಅಮೃತಮತಿಯ ಪ್ರೀತಿಯನ್ನು ಗಳಿಸಲು ಅಲ್ಲ! ಅಮೃತಮತಿ ಮತ್ತು ಅಷ್ಟಾವಂಕನ ಪ್ರೀತಿಯನ್ನು ಅಂದಿನ ಸಮಾಜ ಒಪ್ಪಿಕೊಂಡೀತೆ? ಅಂದಿನ ಸಮಾಜ ಅವರಿಗೆ ಯಾವ ರೀತಿಯ ಶಿಕ್ಷೆಯನ್ನು ವಿಧಿಸಿರಬೇಕು? ಎಂಬ ಪ್ರಶ್ನೆಗಳು ಮೂಡುತ್ತವೆ. ಒಂದು ಹೆಣ್ಣನ್ನು ಒಲಿಸಿಕೊಳ್ಳ ಬೇಕಾದರೆ ಕೇವಲ ಅಧಿಕಾರ, ಹಣ, ಐಶ್ವರ್ಯ, ಸಂಪತ್ತಿನಿಂದ ಸಾಧ್ಯವಿಲ್ಲ. ಆಕೆಗೆ ಬೇಕಾಗಿರುವುದು ನಿಜವಾದ ಪ್ರೀತಿ, ಮಮತೆ, ವಾತ್ಸಲ್ಯಗಳಿಂದ ಆಕೆಯ ಮನಸ್ಸನ್ನು ಗೆಲ್ಲಬೇಕಾದರೆ ಗಂಡು ಹೆಣ್ಣಿನಲ್ಲಿ ಹೊಂದಾಣಿಕೆ ಪ್ರಮುಖ ಪಾತ್ರವಹಿಸುತ್ತದೆ.

**ಪರಾಮರ್ಶನ ಗ್ರಂಥಗಳು:**


1. ತೆಕ್ಕುಂಜ ಗೋಪಾಲಕೃಷ್ಣ ಭಟ್ಟ. (೨೦೧೫). ಜನ್ನ ಕವಿಯ ಯಶೋಧರ ಚರಿತೆ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
2. ಶಿವರುದ್ರಪ್ಪ ಜಿ. ಎಸ್. (೨೦೦೯). ಜಿ. ಎಸ್. ಶಿವರುದ್ರಪ್ಪ ಸಮಗ್ರ ಗದ್ಯ-೨. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.
3. ತೀ.ನಂ.ಶ್ರೀ. (೨೦೦೬). ಸಮಗ್ರ ಗದ್ಯ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
4. ಮುಗಳಿ ರಂ. ಶ್ರೀ. (೨೦೧೨). ಕನ್ನಡ ಸಾಹಿತ್ಯ ಚರಿತ್ರೆ. ಗೀತಾ ಬುಕ್ ಹೌಸ್. ಮೈಸೂರು.
5. ಪುಟ್ಟಯ್ಯ ಬಿ. ಎಂ. (೨೦೧೦). ಸಂಶೋಧನೆ ತಾತ್ವಿಕ ಆಯಾಮಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.